## Question of Privilege against the Mayor, Bangalore City Corporation

ಶ್ರೀ ವಾಟಾಳ್ ನಾಗರಾಜ್.—ಕಾರ್ಪೊರೇಷನ್ ಮೇಯರ್ ಬಗ್ಗೆ ನಾನು 8-9 ದಿವಸಗಳ ಹಿಂದೆ ಒಂದು ಪ್ರಿವಿಲೇಜ್ ಮೋಷನ್ ಕಳುಹಿಸಿದ್ದೆ. ತಾವು ನೋಡುತ್ತೇನೆ ಎಂದು ಹೇಳಿದ್ದಿರಿ. ಇನ್ನೂವರೆಗೆ ಅದನ್ನು ತೆಗೆದುಕೊಂಡಿಲ್ಲ. ದಯವಿಟ್ಟು ಅದರ ಬಗ್ಗೆ ಏನಾಗಿದೆ ಎನ್ನುವುದನ್ನು ತಿಳಿಸುತ್ತೀರಾ ?

ಅಧ್ಯಕ್ಷರು.—ಹೆರ್ತ್ ಸೆಕ್ರೆಟರಿಯವರಿಗೆ ಕಳುಹಿಸಿಕೊಡಿ ಎಂದು ನಾನು ಹೇಳಿದ್ದೇನೆ ಮತ್ತು ನಮ್ಮ ಸೆಕ್ರೆಟರಿಯವರೂ ಕೂಡ ಕಾಗದ ಬರೆದಿದ್ದಾರೆ. ಅಲ್ಲಿಂದ ಉತ್ತರ ಬಂದಮೇಲೆ ಅದನ್ನು ಈ ಸಭೆಯಲ್ಲಿ ಪ್ಲೇಸ್ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ನಾವು ಏಷ್ಟು ಹೇಳಿದರೂ ಇನ್ನೂ ತರಿಸಿಲ್ಲ ಎಂದರೆ ನಾವು ಏನು ತಿಳಿದುಕೊಳ್ಳಬೇಕು ? ಮೇಯರ್, ಕಮೀಷನರ್ ಎಲ್ಲರೂ ಇಲ್ಲೇ ಇದ್ದಾರೆ. ಇಷ್ಟು ಹತ್ತಿರ ಇದ್ದರೂ ಇನ್ನೂವರೆಗೆ ತಾವು ತರಿಸಿಕೊಡುವುದಕ್ಕಾಗುವುದಿಲ್ಲವೇ ಎಂದರೆ ನಿಮಗೆ ಸಿಟ್ಟು ಬರುತ್ತದೆ.

ಅಧ್ಯಕ್ಷರು.—ನಿಮ್ಮ ಮೇಲೆ ನನಗೆ ಸಿಟ್ಟು ಏನು ಇಲ್ಲ. ಪ್ರೊಸೀಜರ್ ಪ್ರಕಾರ ನಮ್ಮ ಸೆಕ್ರೆಟರಿಯವರು, ಹೆರ್ತ್ ಸೆಕ್ರೆಟರಿಯವರಿಗೂ, ಮುನಿಸಿಪಲ್ ಸೆಕ್ರೆಟರಿಯವರಿಗೂ, ಕಾಗದ ಬರೆದಿದ್ದಾರೆ. ಅಲ್ಲಿಂದ ಬಂದ ಮೇಲೆ ಇಡುತ್ತೇನೆ. ಇಷ್ಟು ಹೇಳಿದರೂ ನೀವು ನನ್ನನ್ನು ತರಿಸಿಲ್ಲ, ತರಿಸಿಲ್ಲ ಎಂದು ಹೇಳಿ ಧಾರ್ಜು ಮಾಡುತ್ತೀರಾ.

ಶ್ರೀ ವಾಟಾಳ್ ನಾಗರಾಜ್.—ನೀವು ಕೋಪ ಏತಕ್ಕೆ ಮಾಡಿಕೊಳ್ಳುತ್ತೀರಿ ? ಈಗೊತ್ತೇ ಬರೆದು ಅವರಿಂದ ತರಿಸಿಕೊಳ್ಳುವ ಕೆಲಸ ಮಾಡಿ ಎಂದು ಹೇಳಿದೆ.

ಅಧ್ಯಕ್ಷರು.—ನಾನೂ ಅದೇ ಹೇಳಿದ್ದು. ಅವರಿಗೆ ಬರೆದಿದ್ದೇನೆ ಉತ್ತರ ಬರುತ್ತದೆ ಎಂದು.

ಶ್ರೀ ಹೆಚ್. ಡಿ. ದೇವೆಗೌಡ (ಹೊಳೆನರಸೀಪುರ).—ಮಾನ್ಯ ಸಿದ್ದಪ್ಪನವರು ಹೇಳತಕ್ಕಂಥ ವಿಷಯ ಈವೊತ್ತೆ ಕೊನೆ ದಿವಸವಾಗಿರುವುದರಿಂದ ಈ ಸಭೆಯ ಕಾರ್ಯಕಲಾಪಗಳಲ್ಲಿ ಯಾವುದಾದರೂ ಒಂದು ವೇಳೆಯಲ್ಲಿ ತಮ್ಮ ಅನುಮತಿ ಪಡೆದು ವಿದ್ಯಾ ಮಂತ್ರಿಗಳು ಇದರ ಬಗ್ಗೆ ಹೇಳಬೇಕು.

ಇನ್ನೊಂದು ವಿಷಯ. ಕಾರ್ಪೊರೇಷನ್‌ಗೆ ಸಂಬಂಧಪಟ್ಟ ದಾಖಲೆಗಳನ್ನು ತರಿಸಬೇಕು ಎನ್ನುವ ಬಗ್ಗೆ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಹೇಳಿದ್ದಾರೆ. ಬಹುಶಃ ಈ ಡಿಮ್ಯಾಂಡ್‌ಗಳ ಮೇಲೇನೇ ಈಗ ಮಾತನಾಡಲು ಸಾಕಷ್ಟು ಕಾಲಾವಕಾಶ ಇಲ್ಲದೇ ಇರುವುದರಿಂದ, ಡಿಮ್ಯಾಂಡ್ ಮುಗಿದ ಮೇಲೆ ಆ ನಬ್ಜೆಕ್ಟನ್ನು ತೆಗೆದುಕೊಳ್ಳೋಣ.

ಇನ್ನೊಂದು ವಿಷಯ ಏನೆಂದರೆ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಂತ್ರಿಗಳ ಮೇಲೆ ನಾನು ಎರಡು ಹಕ್ಕುಭಾದ್ಯತೆ ಸೂಚನೆಗಳನ್ನು ಕಳುಹಿಸಿಕೊಟ್ಟಿದ್ದೇನೆ. ಇದು ಮತ್ತು ಶ್ರೀ ವಾಟಾಳ್ ನಾಗರಾಜ್‌ರವರು ಹೇಳಿದಂಥ ದಾಖಲೆಗಳು ತರಿಸಿಕೊಂಡರೆ 15ನೇ ತಾರೀಖು ಆದಮೇಲೆ ತಮ್ಮ ಅನುಮತಿ ಪಡೆದೇನೇ ಯಾವತ್ತಾದರೂ ಒಂದು ದಿನ ಇದನ್ನು ಇಟ್ಟುಕೊಳ್ಳೋಣ.

## Question of Privilege motion against the Engineer-in-Chief and Additional Secretary to Government, P.W.D.

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಮಾನ್ಯ ಶ್ರೀ ಚೆನ್ನಬಸಪ್ಪನವರು ಒಂದು ಆಶ್ವಾಸನೆ ಕೊಟ್ಟಿದ್ದರು. ಆ ಆಶ್ವಾಸನೆಯನ್ನು ಪೂರ್ತಿ ಮಾಡುತ್ತೀರಾ ? ಮಾಡಿದರೆ ಯಾವತ್ತು ಮಾಡುತ್ತೀರಾ ಎನ್ನುವುದನ್ನು ತಿಳಿಸಬೇಕು.

ಅಧ್ಯಕ್ಷರು.—ನಿನ್ನೆ ದಿವಸ ಅಲ್ಲಿ ನಡೆದಂಥ ಪ್ರಸಂಗವುದಲ್ಲಿ ಶ್ರೀಮಾನ್ ಹೆಚ್. ಡಿ. ದೇವೇಗೌಡರು, ಆರ್ಮುಗಂರವರು, ಕೃಷ್ಣನ್‌ನವರು, ನಾಗಣ್ಣನವರು ಮತ್ತು ಬಂಗಾರಪ್ಪನವರು ಇವರೆಲ್ಲರೂ ಒಬ್ಬ ಆಫೀಸರ್ ಮೇಲೆ ಚಾರ್ಜು ಮಾಡಿದ್ದಾರೆ. ಇಲ್ಲಿಯ ಹಕ್ಕುಭಾದ್ಯತೆಗೆ ಧಕ್ಕೆ ಆಗಿದೆಯೆಂದು ಹೇಳಿದರು. ಆ ಆಫೀಸರು ನಮ್ಮ ಆಫೀನರ್‌ಗೆ ಕಾಗದ ಬರೆದು ನಾನು ಹಾಗೆ ಮಾತೇ ಆಡಿಲ್ಲ ಎಂದು ಹೇಳಿದ್ದಾರೆ. ಅವರು ಬರೆದಿರುವ ರಿಪ್ಲೈನ್ ಬಹಳ ದೊಡ್ಡದಾಗಿದೆ.

On the other hand the Officer has explained that he has cautioned the Engineers against interesting themselves in politics as it was commonly understood. I am quite satisfied with this explanation. I therefore feel that no question of privilege arises in this matter. In view of denial of this statement attributed to him, I think, the matter relating to contempt should be closed.

ಶ್ರೀ ಹೆಚ್. ಡಿ. ದೇವೆಗೌಡ.—ಈಗ ತಾವು ರೂಲಿಂಗ್ ಕೊಟ್ಟಿದ್ದೀರಿ. ತಮ್ಮ ರೂಲಿಂಗನ್ನು ಪ್ರಶ್ನೆ ಮಾಡುವುದಿಲ್ಲ. ಪತಕ್ಕೆಂದರೆ ಅದು ನನ್ನ ವ್ಯಾಪ್ತಿಗೆ ಮೀರಿದ್ದು ಅಲ್ಲದೆ ಈ ಸಭೆಯ ವ್ಯಾಪ್ತಿಗೂ ಮೀರಿದ್ದು. ಆವರ ಪೆಂಡರೇ ನಿಮ್ಮ ಉತ್ತರವನ್ನು ಆಂಟಿಸಿಪೇಟ್ ಮಾಡಿದ್ದೆ. ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದ ಕಾಲವಲ್ಲಿ ನಾಳೆ ಈ ರೀತಿ ಆಗಬಹುದು ಎಂದು ತಿಳಿಸಿದ್ದೇನೆ. ಬಹುಶಃ ಆವಾದ ಮೇಲೆ ತಾವು ಬರೆದಿದ್ದೀರಿ, ಅದಕ್ಕೆ ತಮಗೆ ಉತ್ತರ ಬರೆದಿದ್ದಾರೆ. ಅದರ ವಿವರಣೆಯನ್ನು ಕೊಟ್ಟಿದ್ದಾರೆ ಎಂದು ಈ ಸಭೆಗೆ ತಿಳಿಸಿದ್ದೀರಿ. ನಾನಾದರೂ ಕೇಳಿತ್ತೇನೆ. ಆ ದಿವಸದಿಂದ ಇಲ್ಲಿಯವರೆಗೂ ಅವರು ಪತ್ರಿಕೆಗಳಲ್ಲಿ ಅವರ ಹೇಳಿಕೆಗಳನ್ನು ಕಾಂಟ್ರಡಿಕ್ಟ್ ಮಾಡಿಲ್ಲ. ಶನಿವಾರದ ಡೆಕನ್ ಹೆರಾಲ್ಡ್‌ನಲ್ಲೂ ಬಂದಿಲ್ಲ. ನಾನು ಈ ರೀತಿ ಹೇಳಿಲ್ಲ ಎಂದು ಕಾಂಟ್ರಡಿಕ್ಟರಿಯಾಗಿ ಕೂಡ ಹೇಳಿಲ್ಲ, ನನಗೆ ಗೊತ್ತಿದ್ದಮಟ್ಟಿಗೆ ನಿನ್ನೆ ಪತ್ರಿಕೆಯಲ್ಲಿ ಈವೊತ್ತಿನ ಪತ್ರಿಕೆಯಲ್ಲಿ ಬಂದಿಲ್ಲ. ಇದರ ಜೊತೆಗೆ ಆ ಅಧಿಕಾರಿ ಸ್ವಭಾವ ಏನು ಇವೆ ಎಂದರೆ ಆವೊತ್ತಿನ ಪತ್ರಿಕೆಯಲ್ಲಿ ಅವರು ಹಿಂದೆ ಒಬ್ಬ ಸದಸ್ಯರಾಗಿದ್ದಾಗ ಮುಂಜಗಯ್ಯ ಅವರ ಬಗ್ಗೆ ಮಾತನಾಡಿದ್ದನ್ನು ನೋಡಿದರೆ ಅವರ ಸ್ವಭಾವ ಏನು ಎನ್ನುವುದು ಗೊತ್ತಾಗುತ್ತದೆ. ಜಲಮಂಡಲಿಯಲ್ಲಿ ಕೆಲಸ ಮಾಡಿರತಕ್ಕ ಸದಸ್ಯ, ಅಲ್ಲಿಯ ಕೆಲಸದ ಬಗ್ಗೆ ಒಂದು ಹೇಳಿಕೆಯನ್ನು ಕೊಟ್ಟಿದ್ದರ ಪ್ರತಿಕ್ರಿಯೆ ಮುಂಜಿಗಯ್ಯನವರು ಕನಿಷ್ಠ ಅರ್ಹತೆಯ ವ್ಯಕ್ತಿ, ಈಗ ಅವರು ಬಾಯಿಮುಚ್ಚಿಕೊಂಡಿದ್ದು ಬೆಂಗಳೂರಿನ ನಾಗರಿಕರು ಅತ್ಯಂತ ಶೀಘ್ರವಾಗಿ ನೀರನ್ನು ಪಡೆಯಲು ಅವಕಾಶ ಮಾಡಿಕೊಡಬೇಕಾದ ಕಾಲ ಬಂದಿದೆ ಎಂದು ಹೇಳಿದ್ದಾರೆ. ಬಹುಶಃ ನಮ್ಮ ರಾಜ್ಯಾಂಗದ ಪರಿಮಿತಿಯಲ್ಲಿ ಫ್ರೀಡಂ ಆಫ್ ಸ್ಪೀಚ್‌ಗೆ ಅವಕಾಶವಿದ್ದರೂ, ಇವರು ಬಾಯಿ ಮುಚ್ಚಿಸುವುದಕ್ಕೆ ಹೊರಟಿದ್ದಾರೆ. ಇವರ ಧಾಟಿ, ಇವರ ನಡವಳಿಕೆ ಏನು ಎನ್ನುವುದು ಇದರಿಂದ ವ್ಯಕ್ತವಾಗುತ್ತದೆ. ಇದನ್ನು ಪತ್ರಿಕೆಯವರು ಉತ್ಪ್ರೇಕ್ಷೆ ಮಾಡಿ ಬರೆದಿದ್ದಾರೆ ಎಂದು ಹೇಳುವುದಿಲ್ಲ. ಅವರು ಏನು ಹೇಳಿಕೆ ತಯಾರು ಮಾಡಿಕೊಟ್ಟಿದ್ದಾರೆ, ಅದರ ಕಾಪಿ ನನ್ನ ಹತ್ತಿರ ಇದೆ. ಇದರಿಂದ ಅವರ ನಡತೆ ಹೇಗಿದೆ, ಅವರ ಮನೋಧಾವ ಹೇಗಿದೆ ಎನ್ನುವುದು ವ್ಯಕ್ತವಾಗುತ್ತದೆ. ಪೊನ್ನೆ ಅವರು ಹೇಳಿರುವುದು ನತ್ಯಾಂಶ ಎನ್ನುವುದಕ್ಕೆ ಈ ಒಂದು ಹೇಳಿಕೆಯನ್ನು ಅವಲೋಕಿಸಿದರೆ ಅವರ ಮಾತಿನ ಧಾಟಿ, ಹೇಳತಕ್ಕ ರೀತಿ ಇವುಗಳನ್ನು ನೋಡಿದರೆ ಗೊತ್ತಾಗುತ್ತದೆ.

1-30 P.M.

ಡೆಕ್ಕನ್ ಹೆರಾಲ್ಡ್, ಪ್ರಜಾವಾಣಿ, ಇಂಡಿಯನ್ ಎಕ್ಸ್‌ಪ್ರೆಸ್ ಈ ಪತ್ರಿಕೆಗಳು ಯೆಲ್ಲೋ ಜರ್ನಲ್ಸ್ ಅಲ್ಲ. ಆ ಪತ್ರಿಕೆಯಲ್ಲಿ ವರದಿಯಾಗಿರುವುದು ನರಿಯಲ್ಲ ಎಂದು ಕಾಂಟ್ರಡಿಕ್ಟ್ ಮಾಡಬಹುದಾಗಿತ್ತು. ತಮ್ಮಿಂದ ತಿಳಿದಮೇರೆ ಇದರಿಂದ ತೊಂದರೆಯಾಗುತ್ತದೆ ಎನ್ನುವ ದೃಷ್ಟಿಯಿಂದ ಡಿನ್ಯೆ ಮಾಡಿರಬಹುದು. ಅದನ್ನು ಇಷ್ಟು ಲಘುವಾಗಿ ತೆಗೆದುಕೊಳ್ಳುವುದು ಕಷ್ಟವಾಗುತ್ತದೆ. ಏಕೆಂದರೆ ಈಗಾಗಲೇ ತಾವು ನಿರ್ಣಯ ಕೊಟ್ಟಿದ್ದೀರಿ, ಅದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅವರ ಸ್ವಭಾವ ಏನು ಎನ್ನುವುದು ಗೊತ್ತಾಗುತ್ತದೆ. ದಯಮಾಡಿ ರೂಲಿಂಗ್ ಬಗ್ಗೆ ಪುನರ್ಪರಿಶೀಲನೆ ಮಾಡುವುದು ಸೂಕ್ತವೆಂದು ಮನವಿ ಮಾಡುತ್ತಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ತಮ್ಮ ರೂಲಿಂಗನ್ನು ಪ್ರಶ್ನೆ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ತಾವು ತಪ್ಪು ತಿಳಿಯುವಾರದೆಂದು ವಿನಯಪೂರ್ವಕವಾಗಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಪೊನ್ನೆ ದಿವಸ ನಾವು ಈ ಪ್ರಶ್ನೆಯನ್ನು ಎತ್ತಿದಾಗ ಮಾನ್ಯ ಚನ್ನಬಸಪ್ಪನವರು ಆದರ ಬಗ್ಗೆ ವಿಚಾರಣೆ ನಡೆಸಿ ಎಲ್ಲ ವಿಷಯಗಳನ್ನೂ ತಿಳಿಸುವುದಾಗಿ ಹೇಳಿದ್ದರು.